1 ಕರ್ನಾಟಕ ಗೃಹ ಮಂಡಲಿಯ 2006–07ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಆರ್ ಅಶೋಕ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

IV (ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

1993 ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ

1 ಬೆಂಗಳೂರು ಗ್ರಾಮಾಂತರ ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ವಾರ್ಷಿಕ ಲೆಕ್ಕ ತನಿಖಾ ವರದಿ

2 ದಕ್ಷಿಣ ಕನ್ನಡ ಜಿಲ್ಲಾಪಂಚಾಯತ್, ಮಂಗಳೂರಿನ 2005–06 ನೇ ಸಾಲಿನ ವಾರ್ಷಿಕ ಆಡಳಿತ ವರದಿ

3 ರಾಯಚೂರು ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ

4 ಕೊಪ್ಪಳ ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ದೃಢೀಕರಿಸಿದ ವಾರ್ಷಿಕ ಲೆಕ್ಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಆರ್ ಅಶೋಕ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

V (ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ರ ಪರವಾಗಿ)

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 30ನೇ 2005–2006ನೇ ಸಾಲಿನ ವಾರ್ಷಿಕ ವರದಿ

2 ಮೈಸೂರು ಮಿನರಲ್ಸ್ ನಿಯಮಿತದ 40ನೇ 2005–2006ನೇ ಸಾಲಿನ ವಾರ್ಷಿಕ ವರದಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯ 1966ರ ಕಾಯ್ದೆ ಕಲಂ 28(4)ರ ಪ್ರಕಾರ

1 ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯ 2004–05ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ವಿತ್ತೀಯ ಕಾರ್ಯಕಲಾಪಗಳು ಯಾರಿಗೆ? ಒಬ್ಬರಾದರೂ ಸಚಿವರು ಇರಬೇಡವೇ?

ಅಧ್ಯಕ್ಷರು ಉಪ ಮುಖ್ಯಮಂತ್ರಿಗಳು ಬಂದಿದ್ದಾರಲ್ಲ?

ಶ್ರೀ ಧರ್ಮಸಿಂಗ್ ಅವರು ಬಂದಿದ್ದಾರೆ ಅದು ಬೇರೆ ವಿಚಾರ ಒಬ್ಬರಿಗೆ ಅಲ್ಲಿ ಇಲ್ಲಿ ಕೆಲಸ ಇದ್ದರೆ ಹೋಗಲಿ ಆದರೆ ಬೇರೆ ಯಾರೊಬ್ಬರೂ ಇಲ್ಲವಲ್ಲ?

ಅಧ್ಯಕ್ಷರು ಬಹು ಮುಖ್ಯವಾಗಿ ಉಪ ಮುಖ್ಯಮಂತ್ರಿಯವರೇ ಬಂದಿದ್ದಾರಲ್ಲ

ಶ್ರೀ ಧರ್ಮಸಿಂಗ್ ಒಂದು ಬಹಳ ಮುಖ್ಯವಾದ ವಿಚಾರ ಕೊಡಗು ಜಿಲ್ಲೆಯಲ್ಲಿ ಎಲ್ಲರೂ ಪಕ್ಷಭೇದ ಮರೆತು ಪ್ರತಿಭಟನೆ ಮಾಡುತ್ತಿದ್ದಾರೆ

ಅಧ್ಯಕ್ಷರು ದಯಮಾಡಿ ಕೇಳಿ ಅವರ ಮನವಿ ಒಂದು ಗಂಟೆಯೊಳಗೆ ಬಂದಿಲ್ಲ

ಶ್ರೀ ಧರ್ಮಸಿಂಗ್ ಅವರು ಬಂದಿದ್ದಾರೆ ತಾವು ಇರಲಿಲ್ಲವಂತೆ ನಾವು ಅದಕ್ಕೆ ಸಹಿ ಮಾಡಿದ್ದೇವೆ ಒಟ್ಟಿನಲ್ಲಿ ಅವರು ನಿಮ್ಮಲ್ಲಿಗೆ ಬಂದಿದ್ದಾರೆ ಅವರಿಗೆ ಏನು ಮಾಡಬೇಕೆಂದು ಗೊತ್ತಿಲ್ಲ ಅವರು ನಿಮಗೆ ಕಾದುಕೊಂಡು ನಿಂತಿದ್ದಾರೆ ಬಹಳ ಗಂಭೀರವಾದ ಪ್ರಶ್ನೆ ಇವತ್ತು ಕೊಡಗಿನ ಜನರು ಪ್ರತಿಭಟನೆ ಮಾಡುತ್ತಿದ್ದಾರೆ ಅವರು 30ನೇ ತಾರೀಖು ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತಿದ್ದಾರೆ ಇವತ್ತು ಕೊಡಗಿನಲ್ಲಿ ಬೆಂಕಿ ಹತ್ತಿದೆ ಸರ್ಕಾರ ಕಣ್ಣುಮುಚ್ಚಿ ಕೂತಿದೆ ಇವತ್ತು ಅದರ ಬಗ್ಗೆ ಚರ್ಚೆ ಆಗಬೇಕಲ್ಲ? ಯಾವಾಗ ಚರ್ಚೆಗೆ ಅವಕಾಶ ಕೊಡುತ್ತೀರಿ?

ಅಧ್ಯಕ್ಷರು ಇದರ ಬಗ್ಗೆ ಸೋಮವಾರ ಚರ್ಚೆಗೆ ಅವಕಾಶ ಕೊಡುತ್ತೇನೆ

ಶ್ರೀ ಕೆ ಜಿ ಬೋಪಯ್ಯ ಇಡೀ ಕೊಡಗಿನಲ್ಲಿ ಜನರು ಗಲಾಟೆ ಮಾಡುತ್ತಿದ್ದಾರೆ ಸಮಸ್ಯೆ ಬಹಳ ಗಂಭೀರವಾಗಿದೆ ನೀವು ಅರ್ಧವೇ ಮಾಡಿಕೊಳ್ಳುವುದಿಲ್ಲವಲ್ಲ

ಅಧ್ಯಕ್ಷರು ದಯಮಾಡಿ ಕೇಳಿ ನಾಳೆ ಹೌಸ್‌ನಲ್ಲಿ ಉತ್ತರ ಇದೆ ಇಲ್ಲಿಂದ ಬಜೆಟ್ ಪಾಸ್ ಆಗಿ ಹೋದಮೇಲೆ ಸಮಯ ಸಿಗುತ್ತದೆ ಆಗ ಕೊಡುತ್ತೇನೆ

ಶ್ರೀ ಕೆ ಜಿ ಬೋಪಯ್ಯ ಜನರು ಸಾಯುವ ಪರಿಸ್ಥಿತಿಯಲ್ಲಿದ್ದಾರೆ ನಮ್ಮನ್ನು ಯಾರೂ ಮಾತನಾಡಿಸಲು ಇಲ್ಲದ ಪರಿಸ್ಥಿತಿಯಲ್ಲಿದ್ದೇವೆ ಒಂದು

ಕಡೆ ಮಳೆ ಬಂದು ಕಾಫಿ ಬಾಳೆ ತೋಟ ಸರ್ವನಾಶವಾಗಿದೆ ಅದಕ್ಕೆ ಏನಾದರೂ ಪರಿಹಾರ ಕೊಡಬೇಕೆಂದರೆ ಒಂದೂ ದಾಖಲೆ ಸಿಗುತ್ತಿಲ್ಲ

ಅಧ್ಯಕ್ಷರು ತಾವು ದಯಮಾಡಿ ಕುಳಿತುಕೊಳ್ಳಿ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವ ಮೊದಲು ಒಂದು ವಿಚಾರವನ್ನು ಸರ್ಕಾರಕ್ಕೆ ಹೇಳಬಯಸುತ್ತೇನೆ ಇದು ಹಲವಾರು ಬಾರಿ ಈ ಮನೆಯಲ್ಲಿ ಚರ್ಚೆಯಾಗಿದೆ ಮಾನ್ಯ ಜೀವಿಜಯರವರು ಇಲ್ಲಿ ಮಾತನಾಡಿದಾಗ ಖಚಿತವಾದ ಉತ್ತರವನ್ನು ಸರ್ಕಾರದವರು ಕೊಟ್ಟಿದ್ದಾರೆ ಇದರ ಬಗ್ಗೆ ಸರ್ಕಾರದವರು ಬೇಗನೇ ನಿರ್ಧಾರ ತೆಗೆದುಕೊಳ್ಳದಿದ್ದರೆ Privilege ಆಗುತ್ತದೆ ಇದನ್ನು ಸರ್ಕಾರದವರು ಅರ್ಥ ಮಾಡಿಕೊಳ್ಳಬೇಕು ಇದನ್ನು ಮಾಡುತ್ತೇವೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಏನೂ ಮಾಡದೇ ಇಲ್ಲಿ ಬರುವುದು ಉತ್ತರ ಕೊಡುವುದು, ಒಪ್ಪಿಕೊಳ್ಳುವುದು ಹೋಗುವುದು ಸರ್ಕಾರಕ್ಕೆ ಸರಿಯಲ್ಲ

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ ಇವರ ವಿರುದ್ಧ ನಾವು ಎಷ್ಟು Privilege notice ಕೊಡುವುದು? ಸರ್ಕಾರ ಎಲ್ಲಿ ಕೆಲಸ ಮಾಡಿದೆ? ಸರ್ಕಾರ ಯಾವ ಕೆಲಸವನ್ನೂ ಸಹ ಮಾಡಿಲ್ಲ

ಅಧ್ಯಕ್ಷರು ಇದು ಬಹಳ ಮುಖ್ಯವಾದುದು ಈಗ ಸರ್ಕಾರದ ಪರವಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ

ಶ್ರೀ ಧರ್ಮಸಿಂಗ್ ಇವತ್ತು ಮಾನ್ಯ ರಾಮಸ್ವಾಮಿಯವರ report ಬಂದಿದೆ Reportನಲ್ಲಿ ಏನೂ ಇಲ್ಲ ಆದರೆ ಮಾನ್ಯ ರಾಮಸ್ವಾಮಿಯವರು ಸರ್ಕಾರದ ಮೇಲೆ ಇವತ್ತು

ಅಧ್ಯಕ್ಷರು ಈಗ ಆ ವಿಚಾರ ನೀಡ

ಶ್ರೀ ಧರ್ಮಸಿಂಗ್ ಮಾನ್ಯ ರಾಮಸ್ವಾಮಿಯವರ ಅಧ್ಯಕ್ಷತೆಯ ಸದನ ಸಮಿತಿ ವರದಿ ಬಗ್ಗೆಯೂ ಇಲ್ಲಿ ಚರ್ಚೆಯಾಗಬೇಕಾಗುತ್ತದೆ

ಅಧ್ಯಕ್ಷರು ಸೋಮವಾರ ನಾನು ಅವಕಾಶ ಮಾಡಿಕೊಡುತ್ತೇನೆ

ಶ್ರೀ ಧರ್ಮಸಿಂಗ್ ನೀವು ಎಲ್ಲರಿಗೂ ಅವಕಾಶ ಕೊಡಬೇಕು

ಅಧ್ಯಕ್ಷರು ಕೊಡುತ್ತೇನೆ

ಶ್ರೀ ಧರ್ಮಸಿಂಗ್ ಇವತ್ತು ಮತ್ತು ನಾಳೆ ಚರ್ಚೆಯಾಗಲಿ ಸೋಮವಾರ ಅಥವಾ ಮಂಗಳವಾರ ಉತ್ತರ ಕೊಡಲಿ

ಅಧ್ಯಕ್ಷರು ನಿಮಗೆ ನನ್ನ ನಮಸ್ಕಾರ ನೀವು ಇವತ್ತು ಮತ್ತು ನಾಳೆ ಸ್ವಲ್ಪ ದೇವರಂತೆ ಕುಳಿತುಕೊಂಡುಬಿಡಿ

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು .

ವಿಷಯ ಕೊಡಗು ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಜಮ್ಮಾ, ಬಾಣೆ, ಕಾಣೆ ಮತ್ತು ಉಳಿದ ಜಮೀನುಗಳ ಬಗ್ಗೆ ಕಂದಾಯ ಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರೆಲ್ಲಾ ಸೇರಿ ಬಹಳ ಗಂಭೀರವಾದಂತಹ ವಿಚಾರದ ಬಗ್ಗೆ ಪ್ರಸ್ತಾಪಿಸಲು ನೋಟೀಸ್ ನೀಡಿದ್ದಾರೆ ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಜಮ್ಮಾ, ಬಾಣೆ, ಕಾಣೆ ಬಾಣೆ ಮತ್ತು ಇನ್ನೂ ಅನೇಕ ರೀತಿಯ ಜಮೀನುಗಳಿದ್ದು, ಆ ಜಮೀನುಗಳನ್ನು ತಲತಲಾಂತರ ಗಳಿಂದ ಅನುಭವಿಸುತ್ತಾ ಕೃಷಿ ಚಟುವಟಿಕೆಯನ್ನು ಅಲ್ಲಿನವರು ಮಾಡುತ್ತಿದ್ದಾರೆ ಆದರೆ ಇವತ್ತು ನಮ್ಮ ಕಂದಾಯ ಕಾರ್ಯದರ್ಶಿಗಳು ಸುತ್ತೋಲೆಗಳನ್ನು ಹೊರಡಿಸುವುದರ ಮೂಲಕ ಅಲ್ಲಿ ರೈತರಿಗೆ ತುಂಬಾ ಗೊಂದಲದ ವಾತಾವರಣ ಉಂಟಾಗಿದೆ ಅವರು ಸಾಲ, ಸವಲತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಉಸಿರು ಕಟ್ಟುವಂತಹ ಪರಿಸ್ಥಿತಿ ಉಂಟಾಗಿದೆ ಇದರ ಬಗ್ಗೆ ನಾನು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ರೆವಿನ್ಯೂ ಮಿನಿಸ್ಟರ್‌ರವರು ಮಾತನಾಡಿದ್ದೇವೆ ಮಾನ್ಯ ರೆವಿನ್ಯೂ ಮಿನಿಸ್ಟರ್ ಬಂದ ತಕ್ಷಣ, ನಾವೇನು ಈ ಮನೆಗೆ ಭರವಸೆಯನ್ನು ಕೊಟ್ಟಿದ್ದೇವೋ, ಅದೇ ರೀತಿ ಈ ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಇತರ ಜಿಲ್ಲೆಗಳಲ್ಲಿ ಈ ಜಮೀನಿಗೆ ಸಂಬಂಧಪಟ್ಟಂತೆ, ಅವರಿಗೇನು ರೈಟ್ಸ್ ಇದೆಯೋ, ಅದು ಅನೇಕ ಶತಮಾನಗಳಿಂದ, ಬಹಳ ವರ್ಷಗಳಿಂದ, ಅವರ ತಾತ ಮುತ್ತಾಂದಿರ ಕಾಲದಿಂದ ಅವರ ಜೊತೆಯಲ್ಲಿದೆ ಅದಕ್ಕೆ ನಾವು ಕೈ ಹಾಕುವಂತಾದ್ದು ಯಾವುದೇ ರೀತಿಯಿಂದಲೂ ಸಾಧ್ಯವಿಲ್ಲ ಮಾನ್ಯ ಕಂದಾಯ ಸಚಿವರಿಗೆ ಹೇಳಿ, ನಾವು ಈ ಒಂದು ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಆ ಒಂದು ಹಿನ್ನೆಲೆಯಲ್ಲಿ ವಿವರವಾದಂತಹ Statement ವೊಂದನ್ನು ಮಾನ್ಯ ಕಂದಾಯ ಸಚಿವರಿಗೆ ಮಾಡಲಿಕ್ಕೆ ನಾನು ಹೇಳುತ್ತೇನೆ